**<u>ಅಸಲು ದಾವಾ ಸಂಖ್ಯೆ 67/2016</u>** ಡಿ.ಡಬ್ಲ್ಯೂ:- **1**

ದಿನಾಂಕಃ **10-07-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ನಿಪಿಃ2 ಮತ್ತು 3 ಭಾವಚಿತ್ರದಲ್ಲಿ ಕಾಣಿಸುತ್ತಿರುವ ಶೆಡ್ ನಾನು ದಾವಾಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಇತ್ತು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಶೆಡ್‌ನ ಮೇಲ್ಛಾವಣಿಯನ್ನು ತೆಗೆದು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಖಾಲಿ ಜಾಗವನ್ನು ಖರೀದಿ ಮಾಡಿದ್ದೇನೆಂದು ನುಡಿಯುತ್ತಾರೆ. ನಿಪಿಃ2 ಭಾವಚಿತ್ರದಲ್ಲಿ ಕಿಶಾನ್ ಟ್ರಾಕ್ಟರ್ ಗ್ಯಾರೇಜ್ ಎಂದು ಬೋರ್ಡ ಇದೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಖರೀದಿ ಮಾಡಿದ ನಂತರ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಯಾವುದೇ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ. ದಾವಾ ಆಸ್ತಿ ಮತ್ತು ದಾವಾ ಆಸ್ತಿಯ ಅಕ್ಕಪದಲ್ಲಿರುವ ಆಸ್ತಿಗಳನ್ನು ಖರೀದಿ ಮಾಡಿ ಮಳಿಗೆಗಳನ್ನು ನಿರ್ಮಾಣ ಮಾಡಿದ್ದೇವೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಮಳಿಗೆಗಳನ್ನು ನಾವು ಕಟ್ಟಿದ್ದೇವೆ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಭದ್ರಾವತಿ ನ್ಯಾಯಲಯದಲ್ಲಿ ಡಿ.ವಿ.ಅಕ್ಟ್ ಅಡಿಯಲ್ಲಿ ಅರ್ಜಿ ಚಾಲ್ತಿಯಲ್ಲಿರುವ ಬಗ್ಗೆ ಗೊತ್ತಿಲ್ಲ. ನನ್ನ ತಮ್ಮ ಸಾಸ್ವೇಹಳ್ಳಿಯಲ್ಲಿ ವಾಸವಾಗಿದ್ದರಿಂದ 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಅದಂತಹ ತಕರಾರು ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಮೇಲ್ಕಂಡ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಾನು ಖರೀದಿ ಮಾಡುವ ಸಮಯದಲ್ಲಿ ಕಟ್ಟಡ ಇದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ, ಹೊನ್ನಾಳ್ಳಿ ತಹಶೀಲ್ದಾರವರು ನನಗೆ ಬಾಯಿ ಮಾತಿನಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಲು ಯಾವುದೇ ತಕರಾರು ಇಲ್ಲವೆಂದು ತಿಳಿಸಿದರು. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ನಡುವಿನ ತಕರಾರು ಬಗ್ಗೆ ಗೊತ್ತಿದ್ದರಿಂದ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಲು ಕಾನುನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. 1 ಮತ್ತು 2 ನೇ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಈಗಲೂ ಸಹ 1 ನೇ ಪ್ರತಿವಾದಿ

ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದರೂ ಸಹ ನಾನು ಖರೀದಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿಃ1 ದಾಖಲೆಯನ್ನು ನಾನು ಮತ್ತು 1 ನೇ ಪ್ರತಿವಾದಿ ಸೃಷ್ಟಿಮಾಡಿದಂತಹ ದಾಖಲೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನಾನು ಕೃಷಿ ಕುಟುಂಬಕ್ಕೆ ಸೇರಿದವರು ಎಂದು ಹೇಳಿ ತಹಶೀಲ್ದಾರವರಿಗೆ ವಂಚಿಸಿ ಕೃಷಿ ಕುಟುಂಬದ ಸದಸ್ಯರು ಎಂದು ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ. ಕೃಷಿ ಕುಟುಂಬದ ಸದಸ್ಯರ ಪ್ರಮಾಣ ಪತ್ರವನ್ನು ನೋಂದಾಣಾಧಿಕಾರಗಳ ಮುಂದೆ ಹಾಜರುಪಡಿಸಿ ಅವರಿಗೆ ಸಹ ಮೋಸಮಾಡಿದ್ದೇನೆಂದರೆ ಸರಿಯಲ್ಲ. ಆ ಕಾರಣದಿಂದ ನಿಪಿಃ1 ದಾಖೆಯು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನ್ನು ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಕಾರಣ ನಾನು ಕಾನೂನಿನ ಅಡಿಯಲ್ಲಿ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.

**<u>ಅಸಲು ದಾವಾ ಸಂಖ್ಯೆ 104/2015</u>** **ಡಿ.ಡಬ್ಲ್ಯೂ:- 1**

ದಿನಾಂಕಃ **28.06.2022** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ದಾವಾ ಸ್ವತ್ತಿನ ಮನೆಯಲ್ಲಿ

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.